ಏನು ಬರ್ತದೆ ಶೇಟು ಹುಡುಗನೆ. ಒಂದು ಶರ್ಟ್ ಹೊಲಿಸಬೇಕಾದರೆ ಟೈಲರ್‌ಗೆ ಆರು ನೂರು ಕೊಡಬೇಕು ನೋಡು...'

'ಅಯ್ಯಾ ಹುಡುಗ, ನಿನಗೇನು ಗೊತ್ತು ನಮ್ಮ ಫಜೀತಿ. ಎಷ್ಟೋ ಸಾರಿ ಮಕ್ಕಳನ್ನು ಮಂಚದ ಕೆಳಗೆ ಮಲಗಿಸಿ, ಮಂಚದ ಮೇಲೆ ಗಿರಾಕಿಗಳೊಂದಿಗೆ ಚಕ್ಕಂದ ಆಡಿದ್ದೇವೆ. ಒಳಗೆ ಸಂಕಟವಿದ್ದರೂ ಹೊರಗೆ ಚಕ್ಕಂದ. ಚಕ್ಕಂದವಾಡದಿದ್ದರೆ ಯಾವ ಗಿರಾಕಿ ತಾನೆ ಚೌಕಾಸಿ ಮಾಡದೆ ಕಾಸು ಕೊಡ್ತಾನೆ ಹೇಳು. ಗಿರಾಕಿಗಳೇ ನಮಗೆ ದೇವರು. ಗಿರಾಕಿಗಳು ಒಂದೇ ಸಮನೆ ಬರುತ್ತಿದ್ದರೆ ಮೂರು ದಿನ ಹಗಲು ರಾತ್ರಿ ನಿದ್ದೆಗೆಟ್ಟು ಬೇಕಾದ್ರೂ ದಂಧೆಗೆ ಇಳಿಯುತ್ತೇವೆ. ಏಕೆಂದರೆ ನಮ್ಮ ವ್ಯಾಪಾರ ಸದಾ ಒಂದೇ ರೀತಿಯಾಗಿರುತ್ತದೆಂದು ಹೇಳಲಿಕ್ಕೆ ಬರಲ್ಲ. ಎಣ್ಣೆ ಬಂದಾಗ ಕಣ್ಣು ಮುಚ್ಚಬಾರದಲ್ಲ?...'

'ಅಯ್ಯಾ ಬಾಬು, ನೀನಿಲ್ಲಿಗೆ ಹೊಚ್ಚ ಹೊಸಬನಂತೆ ಕಾಣುತ್ತಿದ್ದೀಯ. ಈ ಹಿಂದೆ ನಿನ್ನನ್ನು ಇಲ್ಲಿ ಕಂಡಿದ್ದಿಲ್ಲ. ನೋಡು, ನನ್ನ ಹತ್ತಿರ ಫಿಟ್‌ನೆಸ್ ಸರ್ಟಿಫಿಕೇಟ್ ಇದೆ. ನನಗೆ ಎಚ್‌ಐವಿ ಆಗಲೀ, ವಿಡಿ ಆಗಲೀ ಅಥವಾ ಇನ್ನಿತರ ಯಾವುದೇ ಲೈಂಗಿಕ ಕಾಯಿಲೆ ಇಲ್ಲವೆಂದು ಗೌರ್ನಮೆಂಟ್ ಆಸ್ಪತ್ರೆಯ ಡಾಕ್ಟರ್ ದೃಢೀಕರಣ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆರು ತಿಂಗಳಿಗೊಮ್ಮೆ ಇದನ್ನು ರಿನ್ಯೂ ಮಾಡಿಸಬೇಕು. ಅದಕ್ಕೆ ಡಾಕ್ಟರಿಗೆ ಐನೂರು ಲಂಚ ಕೊಡಬೇಕು. ಬಹುತೇಕ ಗಿರಾಕಿಗಳು ಸರ್ಟಿಫಿಕೇಟ್ ಕೇಳುತ್ತಾರೆ. ಹಾಗಾಗಿ ಸರ್ಟಿಫಿಕೇಟನ್ನು ಸ್ಪಷ್ಟವಾಗಿ ಕಾಣುವಂತೆ ಗೋಡೆಗೆ ನೇತುಹಾಕಿರುತ್ತೇವೆ. ನನ್ನದು ಒರಿಜಿನಲ್ ಸರ್ಟಿಫಿಕೇಟ್ ಎಂದು ನನ್ನೊಂದಿಗೆ ಮಲಗಿದಾಗ ಖಂಡಿತಾ ಫೀಲ್ ಮಾಡ್ತೀಯ'.

'ಎಲವೊ ಸುಂದರಾಂಗ, ನೋಡು ನನ್ನ ಅತ್ತರಿನ ವಾಸನೆ ಎಷ್ಟು ಚಂದ ಘಮಘಮಿಸುತ್ತಿದೆ. ಈ ಅತ್ತರಿನ ವಾಸನೆಯಲ್ಲಿ ನೀನು ಖಂಡಿತಾ ಮೈಮರೆಯುತ್ತೀಯ. ಪ್ರತಿಯೊಬ್ಬ ಗಿರಾಕಿ ಬಂದಾಗಲೂ ನಾನು ಹೊಸ ಅತ್ತರನ್ನು ಪೂಸಿಕೊಳ್ಳುತ್ತೇನೆ. ಸುತ್ತಲೂ ಸಮುದ್ರವಿದ್ದರೂ ಈ ಮುಂಬಯಿಯಲ್ಲಿ ಕೆಲವೊಮ್ಮೆ ನೀರಿಗೆ ಬರ ಬಂದುಬಿಡುತ್ತದೆ. ನೋಡಲ್ಲಿ, ಬ್ಯಾಗಿನ ತುಂಬಾ ಅತ್ತರಿನ ಬಾಟಲಿಗಳನ್ನು ತುಂಬಿಕೊಂಡು ಅತ್ತರು ಮಾರುತ್ತಿದ್ದಾನಲ್ಲ ಆ ಮನುಷ್ಯನನ್ನು. ಅವನಿಗೆ ನಾಗ್ಪಾಡ್‌ನಲ್ಲಿ ನಾಲ್ಕು ಲಕ್ಷ ಬಾಡಿಗೆ ಬರುವ ಬಿಲ್ಡಿಂಗ್ ಇದೆ. ಹತ್ತು ಕಾರುಗಳನ್ನು ಬಾಡಿಗೆಗೆ ಬಿಟ್ಟಿದ್ದಾನೆ. ಶಿವಾಜಿ ಪಾರ್ಕ್ ಬಳಿ ವಾಸಿಸಲೊಂದು ಸುಂದರ ಮನೆಯಿದೆ. ಬೇರೆಯವರಿಗೆ ಅತ್ತರು ಮಾರಲು ಅವನು ಬಿಡುವುದಿಲ್ಲ. ಅದಕ್ಕಾಗಿ ಅವನು ನಾಗ್ಪಾಡ್ ಪೊಲೀಸ್ ಠಾಣೆಗೆ ಒಂದು ಲಕ್ಷ ಪ್ರತಿ ತಿಂಗಳು ಲಂಚ ಕೊಡುತ್ತಾನಂತೆ. ಇಲ್ಲಿನ ರೌಡಿಗಳಿಗೂ ಕುಡಿಸಿ, ತಿನ್ನಿಸಿ, ಖರ್ಚಿಗೂ ಕಾಸು ಕೊಡುತ್ತಾನೆ. ಆದರೂ ಅವನ ಅತ್ತರು ಘಮಘಮ. ಅವನ ಅತ್ತರಿನಲ್ಲಿ ನಮ್ಮ ನೆತ್ತರು ಬೆರೆತಿರುವುದು ವಾಸನೆಯಲ್ಲಿ ಯಾರಿಗೂ ಅರಿವಿಗೆ ಬರುವುದಿಲ್ಲ. ಹಾಗೆ ನೋಡಿದರೆ ಇಡೀ ಮುಂಬಯಿಯ ಅತ್ತರು ವಾಸನೆಯಲ್ಲಿ ನಮ್ಮ ಬೆವರು, ನೆತ್ತರು ನಗುತ್ತಾ ಅಳುತ್ತಿವೆ...'

'ಅಯ್ಯಾ, ಪತಿವ್ರತೆಯ ಮುದ್ದು ಮಗನೆ, ಮುಂಬಯಿಯ ಗರತಿಯರು ನಮಗೆ ಸದಾ ಋಣಿಯಾಗಿರಬೇಕು. ಈ ಕಾಮಾಟಿಪುರ ಇಲ್ಲದಿದ್ದರೆ ಮುಂಬಯಿ ಅತ್ಯಾಚಾರಗಳ ತವರಾಗುತ್ತಿತ್ತೋ ಏನೋ? ಮದುವೆಯಾಗದವರಿಗೆ, ಹೆಂಡತಿ ಸತ್ತವರಿಗೆ, ಹೆಂಡತಿಯಿದ್ದರೂ ದೇಹ ಸುಖದಿಂದ ವಂಚಿತರಾದವರಿಗೆ, ಕಾಮಾತುರದಿಂದ ನರಳುವವರಿಗೆ ಆಶ್ರಯ ನೀಡಿ ನಾವಿಲ್ಲಿ ಸುಖವನ್ನು ಹಂಚುತ್ತೇವೆ. ಮುಂಬಯಿಯ ಸಾವಿರಾರು ಕುಟುಂಬಗಳ ಸ್ವಾಸ್ಥ್ಯವನ್ನು ಕಾಪಾಡುತ್ತಿದ್ದೇವೆ. ಆದರೂ ನಮ್ಮನ್ನು ವೇಶ್ಯೆಯರೆಂದು, ಸೂಳೆಯರೆಂದು ಸಮಾಜ ವ್ಯಂಗ್ಯವಾಡುತ್ತದೆ. ಆದರೆ ಎಲ್ಲಾ ನೋವುಗಳನ್ನೂ ಮೀರಿ ಬದುಕುವ ಶಕ್ತಿ ನಮ್ಮಲ್ಲಿದೆ. ನಮ್ಮ ಬಗ್ಗೆ ನಮಗೇ ಹೆಮ್ಮೆಯೆನಿಸುವುದು ಸಾರ್ಥಕವಲ್ಲವೆ...'

'ಅಯ್ಯಾ ಹುಡುಗ, ಈ ಕಾಮಾಟಿಪುರದ ಜನರಿಗೆ ಸಂಬಂಧಗಳು ಮುಖ್ಯವಂತೂ ಅಲ್ಲವೇ ಅಲ್ಲ. ಇಲ್ಲಿನ ಹೆಂಗಸರಿಗೆ ಸ್ವಂತ ತಂದೆ–ತಾಯಿಗಳು, ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಅಷ್ಟೇಕೆ ಸ್ವಂತ ಗಂಡಂದಿರು, ಮಕ್ಕಳೇ ಗಿರಾಕಿಗಳನ್ನು ಹಿಡಿದು ತರುತ್ತಾರೆ. ಇಲ್ಲಿ ಸಂಬಂಧಗಳಿಗಿಂತ ಹಸಿವು ನೀಗಿಸಿಕೊಳ್ಳುವುದೇ ಮುಖ್ಯ. ಕರುಳನ್ನು ತುಂಬಿಸಿಕೊಳ್ಳುವುದಕ್ಕಿಂತಲೂ ದೊಡ್ಡ ಶ್ರೇಷ್ಠವಾದ ಸಂಬಂಧ ಜಗತ್ತಿನಲ್ಲಿ ಯಾವುದಿದೆ? ಹೊಟ್ಟೆ ತುಂಬಿದವರ ಸಂಬಂಧಗಳೇ ಬೇರೆ, ಹಸಿದವರ ಸಂಬಂಧಗಳೇ ಬೇರೆ. ಧರ್ಮಚಕ್ರವಿರುವ ನೋಟು, ನಾಣ್ಯಗಳನ್ನು ನಾವಿಲ್ಲಿ ದೇಹಗಳನ್ನು ಮಾರಿ ಗಳಿಸಿಕೊಳ್ಳುವುದು ಅಧರ್ಮವೇನಲ್ಲ...'

* * *

ಎಷ್ಟೊಂದು ಕರುಳು ಹಿಂಡುವ, ಒಡಲು ಉರಿಸುವ ಮಾತುಗಳು. ಎಷ್ಟೊಂದು ಬಸವಳಿದ ಕೀರಲು ಧ್ವನಿಗಳು. ಎಷ್ಟೊಂದು ಎದೆ ಹಿಂಡುವ ಘಟನೆಗಳು. ಈ ಕಾಮಾಟಿಪುರ ಒಂದು ಬೃಹತ್ ಒಡಲಾಳದ ಗ್ರಂಥವಾದರೆ, ಇಲ್ಲಿನ ಪ್ರತಿಯೊಬ್ಬ ಮಹಿಳೆಯೂ ಆ ಒಡಲಾಳದಲ್ಲಡಗಿದ ತವಕ ತಲ್ಲಣಗಳ ಒಂದೊಂದು ಪುಟವಿದ್ದಂತೆ. ಡಾಕ್ಟರ್ ಮನೋರಂಜನಿಯವರು ಹೇಳಿದಂತೆ ಇವರೆಲ್ಲರಿಗೂ ಖಂಡಿತವಾಗಿಯೂ ಕೌನ್ಸಿಲಿಂಗ್ ಬೇಕೇಬೇಕು. 'ವಯಸ್ಸಾದ ಮೇಲೆ ಇವರ ಗತಿಯೇನು ಅಲೆಗ್ಸಾಂಡರ್?' ಆತಂಕ ವ್ಯಕ್ತಪಡಿಸಿದ್ದ ಆಸ್ಕರ್ ವೈಲ್ಡ್. ಅಲೆಗ್ಸಾಂಡರ್ ನಗುತ್ತಾ, 'ಅರೆ ಆಸ್ಕರ್, ಈ ಭೂಮಿಗೆ ಬಂದ ಪ್ರತಿಯೊಬ್ಬರೂ ದೇವರ ಮಕ್ಕಳೇ ಎಂದು ಏಸುದೇವ ಹೇಳುತ್ತಾನೆಂದು ನಮ್ಮ ತಾತ ಹೇಳುತ್ತಿದ್ದ. ಹಾಗಾಗಿ ಹುಟ್ಟಿದ ಪ್ರತಿಯೊಬ್ಬರಿಗೆ ದೇವರು ಅವರವರ ಪಾಪ ಪುಣ್ಯಗಳ ಕರ್ಮಕ್ಕನುಸಾರವಾಗಿ ಬದುಕುವ ಹಾದಿಯನ್ನು ತೋರಿಸಿಯೇ ತೋರಿಸುತ್ತಾನೆ. ಸರ್ಕಾರ ಇವರಿಗಾಗಿ ಸರ್ಕಾರಿ ಶಾಲೆಗಳನ್ನು ಮತ್ತು ಆಸ್ಪತ್ರೆಗಳನ್ನು ತೆರೆದಿದೆ. ಲೆಕ್ಕವಿಲ್ಲದಷ್ಟು ಎನ್‌ಜಿಒಗಳು ಧಾರಾವಿ ಮತ್ತು ಕಾಮಾಟಿಪುರಗಳಲ್ಲಿ ಕೆಲಸ ನಿರ್ವಹಿಸುತ್ತಿವೆ. ಅನೇಕ ಮೂಲ ಸೌಕರ್ಯಗಳನ್ನು ಮುಂಬಯಿ ಮಹಾನಗರ ಪಾಲಿಕೆ ಒದಗಿಸುತ್ತಿದೆ.'

ಅಲೆಗ್ಸಾಂಡರ್ ಮಾತುಗಳನ್ನು ಮೀರಿ ಮತ್ತೆ ಧ್ವನಿಗಳು ಬಿಚ್ಚಿಕೊಂಡಿದ್ದವು.

'ಹೌದು ರಾಜಕುಮಾರ, ನಿಮ್ಮಂತೆ ನಮಗೂ ಆಸೆಗಳಿರುತ್ತವೆ. ನಮಗೂ ತಂದೆ–ತಾಯಿ, ಅತ್ತೆ–ಮಾವ, ಗಂಡ ಮಕ್ಕಳು ಇರುತ್ತಾರೆ. ಮೊದಲೇ ಬೀದಿಗೆ ಬಿದ್ದವರು ನಾವು, ಮೈಯಲ್ಲಿ ಕಸುವು ಇರುವ ಸಮಯದಲ್ಲೇ ಸಾಧ್ಯವಾದಷ್ಟು ದುಡಿದು ಬಿಡಬೇಕು.'

'ನಾನು ಬರಿಗೈಯಲ್ಲಿ ಮುಂಬಯಿಗೆ ಬಂದು ಇಪ್ಪತ್ತು ವರ್ಷಗಳಾದವು. ಊರಿನಲ್ಲಿ ತಂದೆ ತಾಯಿ ಅಣ್ಣ ತಮ್ಮಂದಿರಿದ್ದಾರೆ. ಹತ್ತು ಎಕರೆ ಜಮೀನು ಖರೀದಿಸಿಕೊಟ್ಟಿದ್ದೇನೆ. ಬೋರ್‌ವೆಲ್ ಹಾಕಿಸಿಕೊಟ್ಟಿದ್ದೇನೆ. ಮನೆಯನ್ನೂ ಕಟ್ಟಿಸಿಕೊಟ್ಟಿದ್ದೇನೆ. ಅವರೂ ಈಗ ಚೆನ್ನಾಗಿ ದುಡಿಯುತ್ತಿದ್ದಾರೆ. ಊರಿಗೆ ಹೋದರೆ ನನ್ನನ್ನು ಬಂಗಾರದಂತೆ ನೋಡಿಕೊಳ್ಳುತ್ತಾರೆ. ದುಡಿದಿದ್ದು ಸಾಕು, ಬಂದು ಜೊತೆಯಲ್ಲಿ ಸುಖವಾಗಿರುವಂತೆ ಬಲವಂತ ಮಾಡುತ್ತಿದ್ದಾರೆ. ನನಗೀಗ ನಲವತ್ತು ಮುಗಿಯಿತು, ಇನ್ನೆರಡು ಮೂರು ವರ್ಷ ದುಡಿಯುತ್ತೇನೆ. ಆಮೇಲೆ ಇದ್ದೇ ಇದೆ ನಮ್ಮೂರು. ಆದರೆ ಬದುಕು ಕಟ್ಟಿಕೊಳ್ಳಲು ಆಶ್ರಯ ಕೊಟ್ಟ ಈ ಮುಂಬಯಿ ಕೂಡ ನಮ್ಮೂರೆ.'

'ಆಹಾ! ಹಾಗೆ ನೋಡಿದರೆ, ನಾನು ಈ ಕಾಮಾಟಿಪುರಕ್ಕೆ ಬಂದಿದ್ದು ಒಳ್ಳೆಯದೇ ಆಯ್ತು. ಗಂಡನಿಂದ ಮೋಸ ಹೋಗಿ ನಾನಿಲ್ಲಿಗೆ ಬಂದಾಗ ನಾಲ್ಕು ತಿಂಗಳ ಬಸುರಿಯಾಗಿದ್ದೆ. ಬಸುರಿ ಹೆಂಗಸರನ್ನು ಬಯಸಿ ಬರುವ ಸುಮಾರು ಗಿರಾಕಿಗಳಿದ್ದಾರೆ. ನನಗೆ ಹೆಣ್ಣು ಹುಟ್ಟಿದಾಗ ಇಲ್ಲಿ ಎಲ್ಲರೂ ನನ್ನನ್ನು ಅದೃಷ್ಟವಂತೆ ಎಂದರು. ಏಕೆಂದರೆ, ಹೆಣ್ಣು ಮಗುವಾದರೆ ಹದಿನಾರು ವರ್ಷಗಳಿಗೆ ದುಡಿಮೆಗೆ ಹಾಕಬಹುದೆಂದು ಇಲ್ಲಿನ ಬಹುತೇಕರ ಆಶಯ. ಆದರೆ ನಾನು ನನ್ನ ಮಗಳನ್ನು ದಂಧೆಗೆ ಇಳಿಸದೆ ಚೆನ್ನಾಗಿ ಓದಿಸಿದೆ. ಇವತ್ತು ಅವಳು ದೊಡ್ಡ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿದ್ದಾಳೆ. ಅಲ್ಲದೆ ಸುಂದರಿ ಕೂಡ. ಅವಳ ಪೂರ್ವಾಪರವನ್ನು ಲೆಕ್ಕಿಸದೆ ಅವಳನ್ನು ಮದುವೆಯಾಗಲು ಅವಳದೇ ಕಂಪನಿಯ ಸುಮಾರು ಯುವಕರು ಮುಂದೆ ಬಂದಿದ್ದಾರೆ. ನನ್ನನ್ನೂ ಅವರ ಜೊತೆಯಲ್ಲಿ ಇರಿಸಿಕೊಳ್ಳಬೇಕೆಂಬ ಕಂಡೀಷನ್ ಹಾಕಿದ್ದಾಳೆ ಮಗಳು. ಅವರೂ ಸಂತೋಷದಿಂದ ಒಪ್ಪಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಈ ಕಾಮಾಟಿಪುರಕ್ಕೆ ವಿದಾಯ ಹೇಳುತ್ತೇನೆ, ಬಹಳ ಖುಷಿಯಿಂದ ಮತ್ತು ಧನ್ಯತೆಯಿಂದ...'

'ಅಯ್ಯಾ ದೊರೆ ಮಗನೆ, ಎಂಥ ಪ್ರಶ್ನೆ ಹುಟ್ಟಿದೆ ನೋಡು ನಿನ್ನ ಮನಸ್ಸಿನಲ್ಲಿ. ನಿಜ, ಹದಿನಾರು ವರ್ಷದಿಂದ ನಲವತ್ತು ವರ್ಷದವರೆಗೆ ಮಾತ್ರ ನಮಗಿಲ್ಲಿ ಬೆಲೆ ಮತ್ತು ಬೇಡಿಕೆ. ಆ ನಂತರ ನಮ್ಮನ್ನು ಸ್ಕ್ರಾಪ್ ಎಂದು ಕರೆಯುತ್ತಾರೆ. ನಿದ್ದೆಗೆಡುವುದರಿಂದಾಗಿ ನಮ್ಮ ದೇಹಗಳು ಬೇಗನೆ ತಾಕತ್ತನ್ನು ಮತ್ತು ಅಂದವನ್ನು ಕಳೆದುಕೊಳ್ಳುತ್ತವೆ. ಸ್ಕ್ರಾಪ್‌ಗೆ ರೇಟು ಸಿಗುವುದಿಲ್ಲ. ಹಾಗಾಗಿ